## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2019-20ನೇ ಸಾಲಿಗೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಮಾದರಿ ಪಾರಂಪರಿಕ ಗ್ರಾಮ ಯೋಜನೆಯ 2ನೇ ಹಂತದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ :

1. ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ ಆಇ/384/ವೆಚ್ಚ-06/2019, ದಿನಾಂಕ 22.08.2019.
2. ED, MGIRED ರವರ ಪತ್ರ ಸಂಖ್ಯೆ MGI/RTP /63/2015-16, ದಿನಾಂಕ 22.03.2019.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 28 ಜೈಅಯೋ 2019, ದಿನಾಂಕ 23.08.2019 & 15.07.2019.
4. ದಿನಾಂಕ 22.04.2019ರಂದು ನಡೆದ 2ನೇ ಹಂತದ ಮಾದರಿ ಪಾರಂಪರಿಕ ಗ್ರಾಮ ಯೋಜನೆಯ ಸಮಿತಿ ಸಭೆಯ ನಡವಳಿ.

**ಪ್ರಸ್ತಾವನೆ :**

**2019-20ನೇ ಸಾಲಿನಲ್ಲಿ** ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ IREP ಯೋಜನಾ ಕೇಂದ್ರ ಸ್ಥಾಪನೆಗಾಗಿ ಲೆಕ್ಕ ಶೀರ್ಷಿಕೆ 2501-04-105-0-02-059ರಡಿ ರೂ1050.00ಲಕ್ಷಗಳನ್ನು ನಿಗದಿಪಡಿಸಿದೆ. ಈ ಅನುದಾನದಲ್ಲಿ KSBDB ಹಾಗೂ MGIRED ಸಂಸ್ಥೆಗೆ ಅನುಕ್ರಮವಾಗಿ ರೂ.400.00ಲಕ್ಷ ಹಾಗೂ ರೂ.650.00ಲಕ್ಷಗಳನ್ನು ಹಂಚಿಕೆ ಮಾಡಿದೆ.

MGIRED ಗೆ ಹಂಚಿಕೆ ಮಾಡಿದ ಒಟ್ಟಾರೆ ಅನುದಾನ ರೂ.650.00 ಲಕ್ಷಗಳಲ್ಲಿ ರೂ.346.50 ಲಕ್ಷಗಳನ್ನು Addl. Programme Component ಎಂದು ಮರು ಹಂಚಿಕೆ ಮಾಡಿದೆ.

ಮೇಲೆ ಓದಲಾದ (2)ರಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, MGIRED ರವರು ತಿಳಿಸಿದಂತೆ Addl. Programme Componentನಲ್ಲಿ ಒದಗಿಸಲಾದ ರೂ.346.50ಲಕ್ಷಗಳ ಪೈಕಿ ರೂ.300.00ಲಕ್ಷ ಹಾಗೂ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು, ಇಲ್ಲಿ 2019-20ನೇ ಸಾಲಿಗೆ ಉಳಿಕೆಯಾದ ಆರಂಭಿಕ ಶಿಲ್ಕು ಹಾಗೂ ಸುವರ್ಣ ಭೂಮಿ ಯೋಜನೆಯ ಖಾತೆಯಲ್ಲಿನ ಅನುದಾನ ಸೇರಿದಂತೆ ಒಟ್ಟು ರೂ.199.52ಲಕ್ಷ ಅಂದರೆ ಒಟ್ಟಾರೆ ರೂ.499.52ಲಕ್ಷಗಳ ಮೊತ್ತದಲ್ಲಿ 2ನೇ ಹಂತದ ಮಾದರಿ ಪಾರಂಪರಿಕ ಗ್ರಾಮ ಯೋಜನೆಯನ್ನು ಮೆ: ಶಿಲ್ಪ ಕಲಾ ಕುಟೀರ, ಹಾವೇರಿರವರಿಂದ ಅನುಷ್ಠಾನಗೊಳಿಸಿ ಪೂರ್ಣಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು ರೂ.199.52ಲಕ್ಷಗಳನ್ನು RTGS/NEFT ಮೂಲಕ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಖಾತೆಗೆ ವರ್ಗಾಯಿಸುವಂತೆ ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/26/ಜೈಅಯೋ/2019 ಬೆಂಗಳೂರು,**
**ದಿನಾಂಕ.03.10.2019.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2019-20**ನೇ ಸಾಲಿನ ಆಯವ್ಯಯದಡಿ MGIRED ಸಂಸ್ಥೆಗೆ ಒದಗಿಸಿದ ರೂ.346.50 ಲಕ್ಷಗಳ Addl. Programme Component ನ ಪೈಕಿ ರೂ.300.00 ಲಕ್ಷ ಹಾಗೂ KSBDB ವತಿಯಿಂದ ರೂ.199.52ಲಕ್ಷ(2019-20ರ ಪ್ರಾರಂಭಿಕ ಶಿಲ್ಕು ಹಾಗೂ ಸುವರ್ಣ

ಭೂಮಿ ಯೋಜನೆ ಮೊತ್ತ) ಒಟ್ಟಾರೆ **ರೂ.499.52ಲಕ್ಷ(ನಾಲ್ಕು ನೂರಾ ತೊಂಬತ್ತೊಂಬತ್ತು ಲಕ್ಷದ ಐವತ್ತೆರಡು ಸಾವಿರ ರೂಪಾಯಿಗಳು ಮಾತ್ರ)** ಅನುದಾನವನ್ನು **ಉದ್ದೇಶಿತ ಯೋಜನಾ ವರದಿಯನ್ವಯ** 2ನೇ ಹಂತದ ಮಾದರಿ ಪಾರಂಪರಿಕ ಗ್ರಾಮ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲು ಸಂಬಂಧಿತ ಷರತ್ತುಗಳನ್ವಯ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು **ರೂ.199.52** ಲಕ್ಷಗಳನ್ನು RTGS/NEFT ಮೂಲಕ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಖಾತೆಗೆ ವರ್ಗಾಯಿಸಲು ಸೂಕ್ತ ಕ್ರಮವಹಿಸುವುದು.

ಮೇಲೆ (3)ರಲ್ಲಿ ಓದಲಾದ ಆದೇಶಗಳಲ್ಲಿ **2019-20ನೇ** ಸಾಲಿಗೆ MGIRED ಸಂಸ್ಥೆಗೆ Component Wise ಎರಡು ಕಂತುಗಳಲ್ಲಿ ಈಗಾಗಲೇ **ರೂ.325.00ಲಕ್ಷಗಳನ್ನು** ಬಿಡುಗಡೆ ಮಾಡಿದೆ. ಈ Component Wise ಬಿಡುಗಡೆ ಮಾಡಿದ ಅನುದಾನದಲ್ಲಿ ರೂ.150.00ಲಕ್ಷಗಳು ಮಾದರಿ ಪಾರಂಪರಿಕ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ್ದಾಗಿದೆ ಹಾಗೂ ಇನ್ನುಳಿದ **ರೂ.150.00ಲಕ್ಷಗಳನ್ನು** ಬಿಡುಗಡೆ ಮಾಡುವ ಸಂಬಂಧ ಯೋಜನೆಯ ಪ್ರಗತಿ ವಿವರಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕಾರ್ಯನಿರ್ವಾಹಕ ನಿರ್ದೇಶಕರು, MGIRED ರವರು ಕ್ರಮವಹಿಸುವುದು.

**ಷರತ್ತು :**

1. ಮೇಲೆ (4)ರಲ್ಲಿ ಓದಲಾದಂತೆ 02ನೇ ಅಕ್ಟೋಬರ್ 2019ರ ಅವಧಿಯೊಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸುವಂತೆ ತೀರ್ಮಾನಿಸಲಾಗಿತ್ತು. ಮುಂದುವರೆದು **ಈ ಯೋಜನೆಯನ್ನು ಜನವರಿ 2020ರೊಳಗೆ ಪೂರ್ಣಗೊಳಿಸಲು ಕ್ರಮವಹಿಸತಕ್ಕದ್ದು.**
2. ಮಾದರಿ ಪಾರಂಪರಿಕ ಗ್ರಾಮ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಚಿಸಲಾದ ಮೌಲ್ಯಮಾಪನ ಸಮಿತಿಯು ಎಲ್ಲಾ ಹಂತಗಳಲ್ಲಿ ಮೇಲ್ವಿಚಾರಣೆ ನಿರ್ವಹಿಸುವುದು.
3. ಶ್ರೀ. ಟಿ. ಬಿ. ಸೋಲಬಕ್ಕನವರ್, ಹಾವೇರಿ ರವರು ದಿನಾಂಕ 15.03.2019ರಲ್ಲಿ ಪಾರಂಪರಿಕ ಗ್ರಾಮ ಯೋಜನೆಯ 2 ಹಂತದ ಉದ್ದೇಶಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ಅಂದಾಜು ಪ್ರಸ್ತಾವನೆಯನ್ವಯ ಕ್ರಮ ಸಂಖ್ಯೆ 1 ರಿಂದ 19ರವರೆಗಿನ ನಮೂದಿಸಲಾದ ಕಲಾಕೃತಿಗಳು ಸಂಖ್ಯೆವಾರು, ಅಳತೆ, ಪರಿಮಾಣ, ಮೊತ್ತದನ್ವಯ ಉತ್ತಮ ಗುಣಮಟ್ಟದಲ್ಲಿ ಅನುಷ್ಠಾನಗೊಳಿಸತಕ್ಕದ್ದು.
4. ಪ್ರತಿ ಕಲಾಕೃತಿಗಳ ತಾಂತ್ರಿಕ ಪರಿಶೀಲನೆ ನಡೆಸಿ ಗುಣಮಟ್ಟ ಕುರಿತಂತೆ MB Bookನಲ್ಲಿ ನಮೂದಿಸಿ ದೃಢೀಕರಿಸಲು ಒಬ್ಬ ನಿವೃತ್ತ ಇಂಜಿನಿಯರ್ ರವರ ಸೇವೆಯನ್ನು 2ನೇ ಹಂತದ ಪಾರಂಪರಿಕ ಗ್ರಾಮ ಯೋಜನೆಯ ಪ್ರಾಥಮಿಕ ಚಟುವಟಿಕೆಗಳಿಂದ ಯೋಜನೆಯ ಮುಕ್ತಾಯ ಹಂತದವರೆವಿಗೂ ಪಡೆಯಬಹುದಾಗಿದೆ.
5. ಈ ಇಂಜಿನಿಯರ್ ರವರ ಸೇವೆಗೆ ಸಂಬಂಧಿಸಿದಂತೆ 2ನೇ ಹಂತದ ಕಾಮಗಾರಿ ಪೂರ್ಣಗೊಳ್ಳುವವರೆಗೆ ಒಟ್ಟಾರೆಯಾಗಿ ಗೌರವಧನವನ್ನು ನಿಗದಿಪಡಿಸಲು ಮೌಲ್ಯಮಾಪನ ಸಮಿತಿಯಲ್ಲಿ ತೀರ್ಮಾನಿಸತಕ್ಕದ್ದು.

6. ED, MGIRED ರವರು 2ನೇ ಹಂತದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ಬಿಡುಗಡೆ ಮಾಡುವ ಪೂರ್ವದಲ್ಲಿ ಇಂಜಿನಿಯರ್ ರವರು ವಿವಿಧ ಹಂತದ ಕಾಮಗಾರಿ ಕುರಿತಂತೆ ತಾಂತ್ರಿಕ ಪರಿಶೀಲನೆ ಮಾಡಿ ನೀಡಿದ ದೃಢೀಕರಣವನ್ನು ಮೌಲ್ಯಮಾಪನ ಸಮಿತಿಯಲ್ಲಿ ಪರಿಶೀಲಿಸಿ ಸಮಿತಿ ತೀರ್ಮಾನದನ್ವಯ ಅನುದಾನವನ್ನು ಬಿಡುಗಡೆ ಮಾಡತಕ್ಕದ್ದು.
7. ಈ ಯೋಜನೆಯು ಕರ್ನಾಟಕ ರಾಜ್ಯದ ವಿಶಿಷ್ಟ ಪ್ರಾಚೀನ ಪಾರಂಪರೆಯನ್ನು ಪ್ರತಿಬಿಂಬಿಸುವ ಹಾಗೂ ಪ್ರಚಾರ ಮಾಡುವ ಯೋಜನೆಯಾದ್ದರಿಂದ ನೈಜ ಹಾಗೂ ಸುಂದರ ಕಲಾಕೃತಿಗಳ ರಚನೆ, ಉತ್ತಮ ಗುಣಮಟ್ಟ, ದೀರ್ಘಕಾಲ ಬಾಳಿಕೆ ಬರುವಂತಹ ಬಣ್ಣಗಳನ್ನು ಬಳಸಲು ಶ್ರೀ ಟಿ. ಬಿ. ಸೋಲಬಕ್ಕನವರ್, ಶಿಲ್ಪ ಕಲಾ ಕುಟೀರ, ಗೊಟಗೋಡಿ, ಹಾವೇರಿ ರವರು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ರೇವಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪಂ ರಾಜ್ ಇಲಾಖೆ.
2. ನಿರ್ದೇಶಕರು, ಪಿಎಂಐ, ಗ್ರಾಅಪಂ.ರಾಜ್ ಇಲಾಖೆ.
3. ಉಪ ನಿರ್ದೇಶಕರು (ತ್ರಾಂತಿಕ), ಗ್ರಾಮೂಸೌ ಕೋಶ, ಗ್ರಾಅಪ ಇಲಾಖೆ.
4. ಇಲಾಖಾ ಗಣಕ ಕೇಂದ್ರ, ಗ್ರಾಅಪಂ.ಇಲಾಖೆ.
5. ಶ್ರೀ ಟಿ. ಬಿ. ಸೋಲಬಕ್ಕನವರ್, ಗೊಟಗೋಡಿ, ಶಿಗ್ಗಾವ್ ತಾಲ್ಲೂಕು, ಹಾವೇರಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.